**ಓ.ಎಸ್. ನಂಃ 05/2020**
**<u>ಪಿಡಬ್ಲ್ಯೂ:1</u>**

**ದಿನಾಂಕಃ 30-03-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಜಿ.ಬಿ.ಆರ್. ವಕೀಲರಿಂದಃ</u>**

6. 1 ನೇ ಪ್ರತಿವಾದಿ ನನ್ನ ತಂದೆ. 1 ನೇ ಪ್ರತಿವಾದಿಗೆ ಒಟ್ಟು 4 ಜನ ಸಹೋದರರು ಇರುತ್ತಾರೆ. 1 ನೇ ಪ್ರತಿವಾದಿಯ ಸಹೋದರರು ಎಲ್ಲರೂ ಸಹ ಜೀವಂತ ಇದ್ದಾರೆ. 1 ನೇ ಪ್ರತಿವಾದಿಯ ತಂದೆಯ ಹೆಸರು ನಾರಾಯಣ ಅಂತಾ ಇರುತ್ತದೆ. 1 ನೇ ಪ್ರತಿವಾದಿಯ ತಂದೆ ಅಂದರೆ ನನ್ನ ತಾತನಾದ ನಾರಾಯಣ ಇವರಿಗೆ 2 ಜನ ಸಹೋದರರು ಇರುತ್ತಾರೆ ಹಾಗೂ ಅವರ ಹೆಸರು ಶರಣಪ್ಪ ಮತ್ತು ಈರಪ್ಪ ಅಂತಾ ಇರುತ್ತದೆ. ನನ್ನ ತಾತನಾದ ನಾರಾಯಣ ಮತ್ತು ಅವರ ಸಹೋದರರ ಎಲ್ಲರೂ ಸಹ ಆಸ್ತಿಗಳನ್ನು ಪಾಲು ವಿಭಜನೆ ಮಾಡಿಕೊಂಡು ಬೇರೆ ಬೇರೆ ಆಗಿರುತ್ತಾರೆ. ನನ್ನ ತಾತ ಮತ್ತು ಅವರ ಸಹೋದರರ ಮಧ್ಯ ಪಾಲು ವಿಭಜನೆಯು ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

7. 1 ರಿಂದ 5 ನೇ ಪ್ರತಿವಾದಿಯರು ಈಗಾಗಲೇ ಆಸ್ತಿಗಳನ್ನು ತಮ್ಮ ಒಳಗೆ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನನ್ನ ತಾತನಾದ ನಾರಾಯಣ ಇವರ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸೇರಿದ ಯಾವ ಆಸ್ತಿಗಳು ಯಾರ ಹೆಸರಿನಲ್ಲಿ ಇರುತ್ತದೆ ಎಂದು ಸಹ ನನಗೆ ಗೊತ್ತಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಹಿಸ್ಸೆಗೆ ಬರುವ ಜಮೀನಿನ ಮೇಲೆ ಪಾಲು ಕೇಳಿ ಈ ದಾವೆಯನ್ನು ಹೂಡಿರುತ್ತೇವೆ. ನನ್ನ ತಾತನಾದ ನಾರಾಯಣ ಇವರಿಗೆ ಸೇರಿದ ಎಲ್ಲಾ ಜಮೀನುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ.

8. ನನ್ನ ತಾತನಾದ ನಾರಾಯಣ ಇವರಿಗೆ ಒಟ್ಟು 5 ಸರ್ವೆ ನಂಬರಗಳಲ್ಲಿ ಜಮೀನುಗಳು ಇದ್ದವು ಎಂದರೆ ಸರಿ. ನನ್ನ ತಾತನಾದ ನಾರಾಯಣ ಇವರಿಗೆ ಸೇರಿದ

ಜಮೀನುಗಳಲ್ಲಿ 1 ರಿಂದ 5 ನೇ ಪ್ರತಿವಾದಿಯರು ಈಗಾಗಲೇ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾತನಿಗೆ ಸೇರಿದ ಇನ್ನೂ ಕೆಲವು ಜಮೀನುಗಳಲ್ಲಿ ಪಾಲು ವಿಭಜನೆ ಆಗಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ಯಾವ ಸರ್ವೆ ನಂಬರಿನ ಜಮೀನುಗಳಲ್ಲಿ 1 ರಿಂದ 5 ನೇ ಪ್ರತಿವಾದಿಯರ ಮಧ್ಯ ಪಾಲು ವಿಭಜನೆ ಆಗಿರುತ್ತದೆ ಮತ್ತು ಯಾವ ಸರ್ವೆ ನಂಬರಿನ ಜಮೀನುಗಳಲ್ಲಿ 1 ರಿಂದ 5 ನೇ ಪ್ರತಿವಾದಿಯರ ಮಧ್ಯ ಪಾಲು ವಿಭಜನೆ ಆಗಿರುವುದಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. 1 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆ ಮನೆಗಳಲ್ಲಿ ತಮ್ಮ ಕುಟುಂಬದೊಂದಿಗೆ ವಾಸವಿದ್ದಾರೆ ಎಂದರೆ ಸರಿ. ಸುಮಾರು 50 ವರ್ಷಗಳ ಹಿಂದೆ 1 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆ ಆಗಿರುತ್ತಾರೆ.

9. ನಾನು ಈ ದಾವೆಯನ್ನು ಸರ್ವೆ ನಂ. 4 ರ ಜಮೀನಿನ ಸಂಬಂಧ ಹೂಡಿರುತ್ತೇನೆ. ಸರ್ವೆ ನಂ. 4 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ ನಂ. 4 ರ ಜಮೀನು ಕೇವಲ 1 ನೇ ಪ್ರತಿವಾದಿಗೆ ಮಾತ್ರ ಹಿಸ್ಸೆ ಹೋಗಿರುತ್ತದೆ. ಸರ್ವೆ ನಂ. 4 ರ ಜಮೀನು ಕೇವಲ 1 ನೇ ಪ್ರತಿವಾದಿಯ ಹಿಸ್ಸೆಗೆ ಮಾತ್ರ ಹೋಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 5 ಎಕರೆ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ದಾವಾ ಐಟಮ್ ನಂ. 1 ರ ಜಮೀನಾದ ಸರ್ವೆ ನಂ. 4 ಇದು 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಐಟಮ್ ನಂ. 1 ರ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಜಮೀನನ್ನು 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಾನೆ ಮತ್ತು 4 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಜಮೀನನ್ನು 4 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಾನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

10. ನನಗೆ ರವಿ ಮತ್ತು ಶಂಕರ ಅಂತಾ ಎರಡು ಜನ ಸಹೋದರರು ಇದ್ದು 13 ನೇ ಪ್ರತಿವಾದಿಯು ನನ್ನ ಸಹೋದರನಾದ ರವಿಯ ಮಗಳಾಗಿರುತ್ತಾಳೆ. ನನ್ನ ಸಹೋದರರಾದ ರವಿ

ಮತ್ತು ಶಂಕರ ಇಬ್ಬರು ಸಹ ಮರಣ ಹೊಂದಿರುತ್ತಾರೆ. 1 ನೇ ಪ್ರತಿವಾದಿ ಗ್ರಾಮ ಲೆಕ್ಕಾಧಿಕಾರಿ ಎಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ಮದುವೆಯ ಕಾಲಕ್ಕೆ ನನಗೆ ಚಿನ್ನ ಮತ್ತು ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿವಾಹದ ನಂತರದಲ್ಲಿ 1 ನೇ ಪ್ರತಿವಾದಿ ಮತ್ತು ನನ್ನ ಸಹೋದರರಾದ ಶಂಕರ ಮತ್ತು ರವಿ ಇವರು ನಮ್ಮ ಕುಟುಂಬದ ಆಸ್ತಿಗಳನ್ನು ಪಾಲು ವಿಭಜನೆ ಮಾಡಿಕೊಂಡು ಬೇರೆ ಬೇರೆ ಆಗಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೂ ಸಹ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ಕೊಡುವದಾಗಿ ಹೇಳಿದ್ದು ಆದರೆ ನನಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿರುವುದಿಲ್ಲ ಎಂದು ಸ್ವತಃ ನುಡಿದಿರುತ್ತಾರೆ. ಸದರಿ ಪಾಲು ವಿಭಜನೆಯನ್ನು 1 ನೇ ಪ್ರತಿವಾದಿಯೇ ಮಾಡಿರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ನನ್ನ ಸಹೋದರರಾದ ಶಂಕರ ಮತ್ತು ರವಿ ಇವರ ಮಧ್ಯ ಎಷ್ಟು ವರ್ಷಗಳ ಹಿಂದೆ ಪಾಲು ವಿಭಜನೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪಾಲು ವಿಭಜನೆ ಮಾಡುವಾಗ ನಾನು ಸಹ ಕುಟುಂಬದ ಆಸ್ತಿಗಳಲ್ಲಿ ನನ್ನ ಹಿಸ್ಸೆಯನ್ನು ಕೊಡುವಂತೆ ಕೇಳಿರುತ್ತೇನೆ. ನನ್ನ ಸಹೋದರರಾದ ಶಂಕರ ಮತ್ತು ರವಿ ಇವರ ಹಿಸ್ಸೆಗೆ ಬಂದ ಜಮೀನಿನಲ್ಲಿ ಅವರೆ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ನನಗೂ ಸಹ ಪಾಲು ಬರಬೇಕು ಎಂದು ನುಡಿದಿರುತ್ತಾರೆ.

11. 1 ರಿಂದ 5 ನೇ ಪ್ರತಿವಾದಿಯರ ಮಧ್ಯ ಆದ ಪಾಲು ವಿಭಜನೆಯಲ್ಲಿ ದಾವಾ ಐಟಮ್ ನಂ. 1 ರ ಸರ್ವೆ ನಂಬರಿನಲ್ಲಿ 2 ಎಕರೆ 10 ಗುಂಟೆ ಜಮೀನು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ತನ್ನ ಪಾಲಿಗೆ ಬಂದ ಸದರಿ 2 ಎಕರೆ 10 ಗುಂಟೆ ಜಮೀನಿನ ಪೈಕಿ 1 ಎಕರೆ 4 ಗುಂಟೆ ಜಮೀನನ್ನು ಸಹೋದರನಾದ ರವಿ ಇವರ ಹಿಸ್ಸೆಗೆ 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಐಟಮ್ ನಂ. 1 ರ ಆಸ್ತಿಯು ಇನ್ನೂ ಸಹ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಐಟಮ್ ನಂ. 1 ರ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದ 2 ಎಕರೆ 10 ಗುಂಟೆ ಜಮೀನಿನ ಪೈಕಿ 3 ಗುಂಟೆ ಜಮೀನಿನಲ್ಲಿ ಕೃಷಿ ಸಾಮಗ್ರಿಗಳನ್ನು ಸಂಗ್ರಹಿಸಿಡುತ್ತಾರೆ ಮತ್ತು ಬನಿಮೆಗಳನ್ನು ಹಾಕುತ್ತಾರೆ ಎಂದರೆ ಸಾಕ್ಷಿಯು

ಮೊದಲು ಹಾಕುತ್ತಿದ್ದರು ಆದರೆ ಈಗ ಹಾಕುತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯಲ್ಲಿ ಒಕ್ಕಲುತನ ಮಾಡುತ್ತಾರೆ ಆದರೆ ದನಕರಗಳು ಇರುವುದಿಲ್ಲ ಬದಲಾಗಿ ಟ್ರಾಕ್ಟರನಲ್ಲಿ ಒಕ್ಕಲುತನ ಮಾಡುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

12. ದಾವಾ ಐಟಮ್ ನಂ. 1 ರ ಆಸ್ತಿಯು ಗುರುಮಿಠಕಲ್ ಪಟ್ಟಣದಲ್ಲಿ ಇದೆ ಎಂದರೆ ಸರಿ. ದಾವಾ ಐಟಮ್ ನಂ. 1 ರ ಆಸ್ತಿಯ ಸುತ್ತಲು ಹಲವಾರು ಮನೆಗಳು ಆಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಈಗ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿ. ದಾವಾ ಐಟಮ್ ನಂ. 1 ರ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಪ್ಲಾಟಗಳನ್ನು ಮಾಡಿ ಬೇರೆಯವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ